ಹಾಕಿಕೊಳ್ಳುತ್ತಾರೆ. ಪೇಟೆಯ ಚೀಲವನ್ನು ಹಿಡಿದುಕೊಳ್ಳುತ್ತಾರೆ. ಪೇಟೆಗೆ ಒಯ್ಯಲು ಎರಡು ಚೀಲಗಳಿವೆ; ಒಂದು ದೊಡ್ಡ ಚೀಲ, ಇನ್ನೊಂದು ಸಣ್ಣ ಚೀಲ. ದೊಡ್ಡ ಚೀಲ ಮನೆಯ ಅಗತ್ಯವಸ್ತುಗಳನ್ನು ತರಲು ಉಪಯೋಗಿಸಿದರೆ ಸಣ್ಣ ಚೀಲವನ್ನು ಮಾಂಸ, ಮೀನು ಅವಥಾ ಮೊಟ್ಟೆಗಳನ್ನು ತರಲು ಉಪಯೋಗಿಸುತ್ತಾರೆ.

ದಾಸ್ ಬಾಬೂ ಹೆಂಡತಿಯನ್ನು ಕೇಳುತ್ತಾರೆ, 'ಇವತ್ತು ಪೇಟೆಯಿಂದ ಏನ್ ತರ್ಲಿ?'

'ಮೂರು ಕೆ.ಜಿ. ಬಾಸುಮತಿ ಅಕ್ಕಿ, ಕಡ್ಲೆ ಬೇಳೆ, ಎಣ್ಣೆ, ಹಿಟ್ಟು, ಆಲೂಗಡ್ಡೆ, ಪಡವಲಕಾಯಿ, ಬೆಂಡೆಕಾಯಿ, ಹಾಗಲ ಕಾಯಿ, ಹಸಿ ಮೆಣಸು ಮತ್ತು ಇನ್ನೂರು ಗ್ರಾಮ್ ಜವೆಗೋಧಿಯನ್ನು ತನ್ನಿ' ಎನ್ನುತ್ತಾಳೆ ಹೆಂಡತಿ.

'ಇವತ್ತು ಮೀನು ಬೇಡ್ವಾ?'

'ಹಾಂ, ಮೀನು ಹೇಳಲು ಮರೆತೆ. ಮೀನೂ ತನ್ನಿ. ಕತಲಾ ಅಥವಾ ರೋಹೂ ಮೀನು ತರಬೇಡಿ. ದೊಡ್ಡ ಆಕಾರದ ಪಾವದಾ ಮೀನು ತನ್ನಿ. ಮೊಮ್ಮಕ್ಕಳಿಗೆ ಪಾವದಾ ಮೀನು ಅಂದ್ರೆ ತುಂಬಾ ಇಷ್ಟ.'

ಆಗಲೇ ದಾಸ್ ಬಾಬೂ ಅವರ ಮಗ ಬಂದು ಹೇಳುತ್ತಾನೆ, 'ಅಪ್ಪಾ, ನನಗೊಂದು ಶೇವಿಂಗ್ ಕ್ರೀಮ್ ತನ್ನಿ.'

ಸೊಸೆ ಬಂದು ಹೇಳುತ್ತಾಳೆ, 'ಮಾವ, ನನಗೊಂದು ಒಳ್ಳೇ ಶಾಂಪೂ ತನ್ನಿ, ಜೊತೆಗೆ ಒಂದು ಒಳ್ಳೇ ಸೋಪೂ ತನ್ನಿ.'

ಮೊಮ್ಮಗ ಹೇಳುತ್ತಾನೆ, 'ಅಜ್ಜಾ, ನನಗೊಂದು ರೂಲ್ ಹಾಕಿರೋ ನೋಟ್‌ಬುಕ್ ಮತ್ತು ಒಂದು ಪೆನ್ಸಿಲ್ ತನ್ನಿ.'

ಮೊಮ್ಮಗಳು ಹೇಳುತ್ತಾಳೆ, 'ನನಗೊಂದು ಆಲೂಚಿಪ್ಸ್ ಪ್ಯಾಕೇಟ್ ತನ್ನಿ.'

ಇದನ್ನೆಲ್ಲಾ ಕೇಳಿದ ಮಗಳ ಮಗ ಹೇಳುತ್ತಾನೆ, 'ಅಜ್ಜಾ, ನನಗೂ ಒಂದು ಆಲೂಚಿಪ್ಸ್ ಪ್ಯಾಕೇಟ್ ತನ್ನಿ.'

ಎಲ್ಲವನ್ನೂ ಕೇಳಿ ದಾಸ್ ಬಾಬೂ ಮನಸ್ಸಿನಲ್ಲಿ ರೇಗುತ್ತಾರೆ. ತಮ್ಮ ಮಗ, ಸೊಸೆಯ ಬಗ್ಗೆ ರೇಗುತ್ತಾರೆ.

ಅವರು ತಮಗೆ ಬೇಕಾದ ವಸ್ತುಗಳನ್ನು ಖುದ್ದು ಕೊಳ್ಳಬಲ್ಲರು. ಆದರೆ ಕೊಳ್ಳುವುದಿಲ್ಲ! ನನ್ನಿಂದಲೇ ತರಿಸಿಕೊಳ್ಳುತ್ತಾರೆ. ಎಲ್ಲರಿಗೂ ಹಣ ಉಳಿಸುವ ಚಿಂತೆ; ಇದೊಂದು ಅದ್ಭುತ ಮಾನಸಿಕ ಶಕ್ತಿಯಾಗಿದೆ. ಅವರ ದುಡ್ಡಿಗೆ ಬೆಲೆಯಿದೆ, ನನ್ನ ದುಡ್ಡಿಗೆ ಬೆಲೆಯಿಲ್ಲ; ಇದು ಇನ್ನೊಂದು ವಿಧದ ಚಿಂತೆ. ಆದರೆ ಈಗ ದಾಸ್ ಬಾಬೂ ಇದನ್ನೆಲ್ಲಾ ಹೇಳಿ ಅಶಾಂತಿಯನ್ನು ಸೃಷ್ಟಿಸಲು ಬಯಸುವುದಿಲ್ಲ. ಹೀಗಾಗಿ ಮಾತನಾಡದೆ ಮೌನ ವಹಿಸುತ್ತಾರೆ. ಯಾರು ಏನು ಹೇಳುವರೋ, ಎಲ್ಲವನ್ನೂ ಕೇಳುತ್ತಾರೆ. ಆದರೆ ದಾಸ್ ಬಾಬೂ ಅವರಿಗೆ ಈಗ ಇದೆಲ್ಲಾ ಇಷ್ಟವಾಗುವುದಿಲ್ಲ, ಅವರಿಂದ ಇದನ್ನೆಲ್ಲಾ ಸಹಿಸಲು ಆಗುತ್ತಿಲ್ಲ.

ಆದರೂ ದಾಸ್ ಬಾಬೂ ಚೀಲಗಳನ್ನು ಹಿಡಿದು ಪೇಟೆಗೆ ಹೋಗುತ್ತಾರೆ. ಎಲ್ಲರ ಅಗತ್ಯಗಳನ್ನು ನೆನೆಪಿಸಿಕೊಳ್ಳುತ್ತಾ ಪೇಟೆಯಲ್ಲಿ ಎಲ್ಲಾ ವಸ್ತುಗಳನ್ನು ಕೊಳ್ಳುತ್ತಾರೆ. ಎಲ್ಲವನ್ನೂ ಕೊಂಡ ನಂತರ ದೊಡ್ಡ ಚೀಲ ಭಾರವಾಯಿತು, ಮೂರು ಕೆ.ಜಿ. ಬಾಸುಮತಿ ಅಕ್ಕಿ ಕೊಳ್ಳಬಾರದಿತ್ತು, ಆದರೆ ಈಗೇನು ಮಾಡುವುದು, ಕಷ್ಟದಿಂದ ಚೀಲ ಹೊತ್ತು ಹೋಗಲೇಬೇಕು ಎಂದು ಯೋಚಿಸುತ್ತಾರೆ.

ದಾಸ್ ಬಾಬೂ ಪೇಟೆಯಿಂದ ಹೊರಟು ಒಂದು ಚಹಾ ಅಂಗಡಿಯ ಬಳಿ ನಿಲ್ಲುತ್ತಾರೆ. ಒಂದು ಚಹಾಕ್ಕೆ ಆದೇಶಿಸುತ್ತಾರೆ. ಅವರು ನಿತ್ಯ ಪೇಟೆಯಲ್ಲಿ ವಸ್ತುಗಳನ್ನು ಖರೀದಿಸಿದ ನಂತರ ಈ ಚಹಾ ಅಂಗಡಿಗೆ ಬರುತ್ತಾರೆ; ಇದು ಅವರ ಅಭ್ಯಾಸವಾಗಿದೆ. ಇಲ್ಲಿ ಒಂದು ಕಪ್ ಚಹಾ ಕುಡಿದು ನಂತರ ತಮ್ಮ ಮನೆಗೆ ಹೋಗುತ್ತಾರೆ. ಇಂದು ಸಹ ಚಹಾ ಅಂಗಡಿಯೊಳಗೆ ಬಂದು ಕೂರುತ್ತಾರೆ. ಅವರ ಎದುರು ದತ್ತೋ ಬಾಬೂ ಕೂತಿದ್ದಾರೆ. ದತ್ತೋ ಬಾಬೂ ಇವರು ವಾಸಿಸುವ ಬೀದಿಯಲ್ಲಿಯೇ ವಾಸಿಸುತ್ತಾರೆ. ಇಬ್ಬರಿಗೂ ಅನೇಕ ದಿನಗಳಿಂದ ಪರಿಚಯವಿದೆ. ದತ್ತೋ ಬಾಬೂ ಸಹ ನಿತ್ಯ ಪೇಟೆಯಿಂದ ಮರಳಿ ಬಂದು ಇದೇ ಚಹಾ ಅಂಗಡಿಗೆ ಬರುತ್ತಾರೆ. ಅವರು ಸಹ ದಾಸ್ ಬಾಬೂ ಅವರೊಂದಿಗೆ ಕೂತು ಸುಮಾರು ಅರ್ಧ ಗಂಟೆ ಕಾಲ ಅದೂ-ಇದೂ ವಿಷಯ ಮಾತನಾಡುತ್ತಾರೆ. ನಂತರ ಇಬ್ಬರು ತಮ್ಮ-ತಮ್ಮ ಚೀಲ ಹೊತ್ತು ತಮ್ಮ-ತಮ್ಮ ಮನೆಗೆ ಹೋಗುತ್ತಾರೆ. ದತ್ತೋ ಬಾಬೂ ಅವರ ಆರೋಗ್ಯ ಹದಗೆಟ್ಟಿದೆ, ಆಗಾಗ ಅವರಿಗೆ ತಲೆಸುತ್ತು ಬರುತ್ತದೆ.

ದಾಸ್ ಬಾಬೂ ಅವರ ಎದುರು ಚಹಾ ಬರುತ್ತದೆ.

ಚಹಾ ಗುಟುಕರಿಸುತ್ತಾ ಅವರು ಕೇಳುತ್ತಾರೆ, 'ಹೇಗಿದ್ದೀರ?'